ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE : 29-3-2

# ಶಾಸಕರಿಗೂ ನಂಬರ್ ಪ್ಲೇಟ್ ರೂಲ್ಸ್ ಬಿಸಿ

ಬೆಂಗಳೂರು: ಖಾಸಗಿ ವಾಹನಗಳ ನಂಬರ್ ಪ್ಲೇಟ್ ನಿಯಮ ಉಲ್ಲಂಘನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ವಾಹನಗಳ ನೋಂದಣಿ ಫಲಕದ ಮೇಲೆ ಅನಧಿಕೃತವಾಗಿ ಹೆಸರು, ಚಿಹ್ನೆ/ಲಾಂಛನ ಹಾಗೂ ಇತರ ಸಂಘ-ಸಂಸ್ಥೆಗಳ ಹೆಸರು ಹಾಕಿಕೊಳ್ಳುವುದು ಕಾನೂನು ಬಾಹಿರ. ಅಂತಹ ಫಲಕಗಳನ್ನು ತೆರವುಗೊಳಿಸುವಂತೆ ಸಾರಿಗೆ ಇಲಾಖೆ ಪ್ರಕಟಣೆ ನೀಡಿತ್ತು. ಆದರ ಬೆನ್ನಲ್ಲೇ ವಿಧಾನಪರಿಷತ್ ತನ್ನ ಸದಸ್ಯರಿಗೆ ಪ್ರಕಟಣೆ ಹೊರಡಿಸಿದೆ. ಸದಸ್ಯರು ಖಾಸಗಿ ವಾಹನಗಳ ನೋಂದಣಿ ಫಲಕಗಳ ಮೇಲೆ ಹೆಸರು, ಚಿಹ್ನೆ/ ಲಾಂಛನ ಹಾಕಿದ್ದಲ್ಲಿ ಕೂಡಲೇ ತೆರವುಗೊಳಿಸಬೇಕು. ಇನ್ನು ಮುಂದೆ ಅನಧಿಕೃತ ಚಿಹ್ನೆ, ಫಲಕ, ಹೆಸರುಗಳನ್ನು ನೋಂದಣಿ ಫಲಕದ ಮೇಲೆ ಹಾಕಿಕೊಳ್ಳಬಾರದೆಂದು ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮೀ ಸೂಚಿಸಿದ್ದಾರೆ.